**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: DPUE-SPR10Misc(Misc)/3/2022

ದಿನಾಂಕ: 15-09-2025

## ಜ್ಞಾಪನ

ವಿಷಯ: 2025-26 ನೇ ಸಾಲಿನ ದಾಖಲಾತಿಯಾಗಿರುವ ವಿದ್ಯಾರ್ಥಿಗಳ ವಿಶೇಷ ಕ್ರೀಡಾ ನಿಧಿಯ [SSF] ವಂತಿಗೆಯನ್ನು ಪಾವತಿಸಿ, ಮಾಹಿತಿಯನ್ನು SATS PORTAL ದಾಖಲಿಸುವ ಕುರಿತು.

ಉಲ್ಲೇಖ: DPUE-SPR10Misc(Misc)/3/2022, ದಿನಾಂಕ: 08/07/2025.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2025-26ನೇ ಸಾಲಿನಲ್ಲಿ ದಾಖಲಾಗಿರುವ ಕಾಲೇಜಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಿಶೇಷ ಕ್ರೀಡಾ ನಿಧಿ [SSF] ವಂತಿಗೆಯ (ಪ್ರತಿ ವಿದ್ಯಾರ್ಥಿಗೆ ರೂ 34 ರಂತೆ) ಮೊತ್ತವನ್ನು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಬೆಂಗಳೂರು, ಇವರ ಹೆಸರಿನಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನ ಕ್ರೀಡಾ ಖಾತೆ ಸಂಖ್ಯೆ: 520101019704581, IFSC CODE: UBIN0903299 ಗೆ ಆನ್ ಲೈನ್ [RTGS/NEFT] ಮೂಲಕ ದಿನಾಂಕ: 11-07-2025 ರೊಳಗೆ ಗೆ ಜಮೆ ಮಾಡಲು ಈಗಾಗಲೇ ಸೂಚಿಸಲಾಗಿತ್ತು.

ಅದರಂತೆ ಇಲ್ಲಿಯವರೆಗೂ SSF ವಂತಿಗೆಯ ಮೊತ್ತವನ್ನು ಪಾವತಿಸದೇ ಕಾಲೇಜಿನ ಖಾತೆಯಲ್ಲಿಯೇ ಉಳಿಸಿಕೊಂಡಿರುವ ಕಾಲೇಜಿನ ಪ್ರಾಂಶುಪಾಲರುಗಳಿಗೆ ದಿನಾಂಕ: 18-09-2025 ರೊಳಗಾಗಿ ಸದರಿ ಖಾತೆಗೆ ಜಮೆ ಮಾಡಿ ಪಾವತಿಸಿದ ವಿವರವನ್ನು ಕಾಲೇಜಿನ SATS PORTAL ನ SPORTS SSF FEES PAID DETAILS ನಲ್ಲಿ ಕಡ್ಡಾಯವಾಗಿ ದಾಖಲಿಸಿ ಅಪ್‌ಡೇಟ್ ಮಾಡುವ ಕುರಿತು ಜಿಲ್ಲಾ ಉಪನಿರ್ದೇಶಕರು ಅಗತ್ಯ ಕ್ರಮವಹಿಸುವುದು ಮತ್ತು ಪಾವತಿಸಿದ ಮಾಹಿತಿಯನ್ನು ಕಾಲೇಜಿನಿಂದ ಕೇಂದ್ರ ಕಛೇರಿಗೆ ನೇರವಾಗಿ ಕಳುಹಿಸದೇ ಜಿಲ್ಲಾ ಉಪನಿರ್ದೇಶಕರು ಎಲ್ಲಾ ಕಾಲೇಜಿಗಳಿಂದ ಪಡೆದು ಜಿಲ್ಲೆಯ ಎಲ್ಲಾ ಕಾಲೇಜುಗಳ ಕ್ರೋಢೀಕೃತ ಮಾಹಿತಿಯನ್ನು ಧೃಡೀಕರಿಸಿ ಸಹಾಯಕ ನಿರ್ದೇಶಕರು (ಕ್ರೀಡೆ) ಇವರಿಗೆ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

Scanned with OKEN Scanner